# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1145 |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 18-12-2024 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಬೈಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕವಲಾಪೂರವಾಡ ಸಮೀಪದಲ್ಲಿರುವ ಪೋಲ್ಟ್ರೀ ಫಾರಂ (ಕ್ವಾಲಿಟಿ ಅನಿಮಲ್ ಫೀಡ್ಸ್ ಪ್ರೈವೇಟ್ ಲಿಮಿಟೆಡ್) ನಿಂದ ಬರುವ ದುರ್ವಾಸನೆಯಿಂದ ಗ್ರಾಮಸ್ಥರು ಮತ್ತು ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಕುರಿತು; ಸದರಿ ಗ್ರಾಮಸ್ಥರು ನಿರಂತರ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ಪೋಲ್ಟ್ರೀ ಫಾರಂ ಸಂಬಂಧಿಸಿದಂತೆ ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಬೈಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ತೇರ್ಥಕುಂಡೆ ಗ್ರಾಮದ ಹ್ಯಾಮಲೆಟ್ ಆದ ಕವಲಾಪೂರವಾಡದ ಸರ್ವೆ ನಂ.86ರ ಜಮೀನಿನಲ್ಲಿ ಕ್ವಾಲಿಟಿ ಅನಿಮಲ್ ಫೀಡ್ಸ್ ಪ್ರೈವೇಟ್ ಲಿಮಿಟೆಡ್ ಇವರು 2009 ರಿಂದ ಕೋಳಿ ಸಂವರ್ಧನಾ ಕೇಂದ್ರವನ್ನು ನಡೆಸುತ್ತಿದ್ದಾರೆ<br><br>ಕೋಳಿ ಸಾಕಾಣಿಕಾ ಕೇಂದ್ರದಿಂದಾಗುವ ದುರ್ವಾಸನೆ ಮತ್ತು ನೊಣಗಳ ಹಾವಳಿ ಕುರಿತು ಸ್ಥಳೀಯ ಗ್ರಾಮಸ್ಥರು ದೂರುಗಳನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದು, ಸದರಿ ದೂರಿನನ್ವಯ ಜಿಲ್ಲಾಡಳಿತ, ಜಿಲ್ಲಾ ಉಪನಿರ್ದೇಶಕರು ಪಶು ಸಂಗೋಪನೆ ಇಲಾಖೆ, ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಪರಿಸರ ಮಾಲಿನ್ಯ ಅಧಿಕಾರಿಗಳು ನಿಯಮಿತವಾಗಿ ಘಟಕಕ್ಕೆ ಭೇಟಿ ನೀಡಿ ಕೋಳಿ ಸಾಕಾಣಿಕಾ ಕೇಂದ್ರದಿಂದಾಗುವ ದುರ್ವಾಸನೆ ಮತ್ತು ನೊಣಗಳ ಹಾವಳಿ ನಿವಾರಣೆಗಾಗಿ ಸಲಹೆ ಸೂಚನೆ ನೀಡಿರುತ್ತಾರೆ. ಅದರಂತೆ ಪೋಲ್ಟ್ರೀ ಫಾರಂನವರಿಗೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.<br><br>1. ಸದರಿ ಫಾರಂದಲ್ಲಿ ಸ್ವಚ್ಛತೆ ಕಾಪಾಡುವ ಉದ್ದೇಶದಿಂದ ಮರಣಹೊಂದಿದ ಕೋಳಿಗಳನ್ನು ವಿಲೇವಾರಿ ಮಾಡಲು ಇನ್ಸಿನೇಟರ್ ಅಳವಡಿಸಲು ಸೂಚಿಸಲಾಗಿದೆ.<br>2. ಕವಲಾಪೂರವಾಡದ ದಿಕ್ಕಿಗೆ ಸಾಕಷ್ಟು ವಿವಿಧ ತಳಿಯ ಮರಗಳು ಬೆಳೆಸಿದ್ದು ದುರ್ವಾಸನೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ.<br>3. ನೊಣಗಳ ಹಾವಳಿ ತಡೆಗಟ್ಟಲು ಕೋಳಿ ಸಾಕಾಣಿಕಾ ಪ್ರದೇಶವನ್ನು ಮೇಲಿಂದ ಮೇಲೆ ಸ್ವಚ್ಛವಾಗಿಡುವಂತೆ ಕ್ರಮವಹಿಸಲು ಸೂಚಿಸಿದೆ. |

| | | |
|---|---|---|
| | | 4. ಮರಣಹೊಂದಿದ ಕೋಳಿಗಳನ್ನು ವಿಲೇವಾರಿ ಮಾಡಲು ಇನ್ಸಿನೇಟರ್ ಯುನಿಟ್‌ನ್ನು ಭೂಮಿ ಮಟ್ಟದಿಂದ ಎತ್ತರಕ್ಕೆ ನಿರ್ಮಿಸಲು ಸೂಚಿಸಿದೆ.<br>5. ಸದರಿ ವಿಷಯದ ಕುರಿತು ಡಾ: ಪವಾರ, ವ್ಯವಸ್ಥಾಪಕರು, ಕ್ವಾಲೀಟ್ ಪೋಲ್ಟ್ರೀ ಫಾರಂನವರು ಬ್ರೀಡರ್ ಬರ್ಡ್ಸ್ ಶೆಡ್‌ಗಳನ್ನು ನೆಲಸಮಗೊಳಿಸಿ ಹ್ಯಾಚರಿ ಪ್ರಾಜೆಕ್ಟ್ ಮತ್ತು ಸೋಲಾರ್ ಪ್ರಾಜೆಕ್ಟ್‌ಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿದರು.<br>6. ಮುಂದುವರೆದು, ಚಾಲ್ತಿಯಲ್ಲಿರುವ ಕೋಳಿ ಸಾಕಾಣಿಕಾ ಕೇಂದ್ರದಲ್ಲಿರುವ ಕೋಳಿಗಳನ್ನು ವಿಲೇವಾರಿ ಮಾಡಿದ ನಂತರ ಕೋಳಿ ಸಾಕಾಣಿಕಾ ಕೇಂದ್ರವನ್ನು ಮಾರ್ಚ್-2025 ರೊಳಗಾಗಿ ಸ್ಥಗಿತಗೊಳಿಸುವುದಾಗಿ ತಿಳಿಸಿದ್ದಾರೆ. |
| ಆ) | ಸದರಿ ಪೋಲ್ಟ್ರೀ ಫಾರಂ ಕವಲಾಪೂರವಾಡ ಗ್ರಾಮದಿಂದ ಕೇವಲ 300 ಮೀಟರ್ ಒಳಗೆ ಇದ್ದು, ಇದರಿಂದ ಗ್ರಾಮಸ್ಥರ ಮನೆಯೊಳಗೆ ಮತ್ತು ಅಡಿಗೆ ಕೋಣೆಯೊಳಗೆ ನಿರಂತರ ವಾಸನೆ ಮತ್ತು ನೊಣಗಳು ಬರುತ್ತಿರುವುದು ಜಿಲ್ಲಾ ಆರೋಗ್ಯ ಇಲಾಖೆಯ ಅಧಿಕಾರಿಗಳು ಗಮನಿಸಿದ್ದು, ಸದರಿ ಸ್ಥಳಕ್ಕೆ ಜಿಲ್ಲಾಧಿಕಾರಿಗಳೂ ಕೂಡ ಭೇಟಿ ನೀಡಿದರೂ ಪ್ರಕರಣ ಇತ್ಯರ್ಥವಾಗದಿರಲು ಕಾರಣಗಳೇನು; (ವಿವರ ನೀಡುವುದು) | ದಿನಾಂಕ:10-08-2024 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಆರೋಗ್ಯಾಧಿಕಾರಿಗಳು, ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ ಮತ್ತು ಜಿಲ್ಲಾ ಪರಿಸರ ಮಾಲಿನ್ಯ ನಿಯಂತ್ರಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿ ಸ್ವಚ್ಛತೆ ಕಾಪಾಡುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಲು ಕೋಳಿ ಸಾಕಾಣಿಕಾ ಕೇಂದ್ರದ ಉಸ್ತುವಾರಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.<br>ಪ್ರಸ್ತುತ ಚಾಲ್ತಿಯಲ್ಲಿರುವ ಕೋಳಿ ಸಾಕಾಣಿಕಾ ಕೇಂದ್ರದಲ್ಲಿರುವ ಕೋಳಿಗಳನ್ನು ವಿಲೇವಾರಿ ಮಾಡಲು 6 ತಿಂಗಳು ಕಾಲಾವಕಾಶ ಬೇಕಾಗಿದ್ದು, ನಂತರ ಕೋಳಿ ಸಾಕಾಣಿಕಾ ಕೇಂದ್ರವನ್ನು ಸ್ಥಗಿತಗೊಳಿಸುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ತಿಳಿಸಿರುತ್ತಾರೆ.<br>ಜಿಲ್ಲಾಧಿಕಾರಿಗಳು ಅಲ್ಲಿಯವರೆಗೆ ಕೋಳಿ ಸಾಕಾಣಿಕಾ ಕೇಂದ್ರದಲ್ಲಿ ಎಲ್ಲಾ ರೀತಿಯ ಸ್ವಚ್ಛತೆಯನ್ನು ಕಾಪಾಡಿಕೊಂಡು ದುರ್ವಾಸನೆ ಮತ್ತು ನೊಣಗಳ ಹಾವಳಿ ತಡೆಗಟ್ಟಲು ಕ್ರಮ ಕೈಗೊಂಡು ಗ್ರಾಮಸ್ಥರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಸೂಚಿಸಿರುತ್ತಾರೆ.<br>ತಹಶೀಲ್ದಾರ್, ಖಾನಾಪೂರ ಇವರಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ಮಾಡಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಂದ ಸ್ಥಳದಲ್ಲಿಯೇ ಸೂಚನೆ ನೀಡಲಾಗಿದೆ. |

| | | |
|---|---|---|
| ಇ) | ಕಮಲಾಪೂರವಾಡದ ಗ್ರಾಮಸ್ಥರಿಗೆ ಸದರಿ ಪೌಲ್ಟ್ರಿ ಫಾರಂನಿಂದ ಉಂಟಾಗುತ್ತಿರುವ ದುರ್ವಾಸನೆ ಮತ್ತು ನೊಣ ಉತ್ಪತ್ತಿಯಿಂದ ಮುಂದಿನ ದಿನಗಳಲ್ಲಿ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದ್ದು, ಸರ್ಕಾರ ಇದರ ಕುರಿತು ತೆಗೆದುಕೊಂಡಿರುವ ಮುಂಜಾಗೃತಾ ಕ್ರಮಗಳೇನು? | ಕೋಳಿ ಸಾಕಾಣಿಕಾ ಕೇಂದ್ರದ ಅಧಿಕಾರಿಗಳು ಲಾರ್ವಾ ಮತ್ತು ನೊಣ ಮತ್ತು ವಾಸನೆ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಪಾಲನೆ ಮಾಡಿರುತ್ತಾರೆ.<br>1) ಲಾರ್ವಾ ಬೆಳವಣಿಗೆ ತಡೆಗಟ್ಟಲು ಡಿ.ಎಂ.ಓ. ಕಲ್ಚರ್ ಅಳವಡಿಸಿಕೊಂಡಿರುತ್ತಾರೆ.<br>2) ಲಾರ್ವಾಡೆಕ್ಸ್ ಔಷಧಿಯನ್ನು ಉಪಯೋಗಿಸಿರುತ್ತಾರೆ.<br>3) ನೆಲಹಾಸಿಗೆಯಲ್ಲಿ ಭತ್ತದ ಹೊಟ್ಟು ಉಪಯೋಗಿಸಿರುತ್ತಾರೆ.<br>4) ನೊಣಗಳ ತಡೆಗಟ್ಟುವುದಕ್ಕಾಗಿ Fly act speedy Paint ಹಾಗೂ lice out ಉಪಯೋಗಿಸಿರುತ್ತಾರೆ.<br>5) Literon Plus ನ್ನು ವಾಸನೆ ತಡೆಗಟ್ಟಲು ಉಪಯೋಗಿಸಿರುತ್ತಾರೆ.<br>ಚಾಲ್ತಿಯಲ್ಲಿರುವ ಕೋಳಿ ಸಾಕಾಣಿಕಾ ಕೇಂದ್ರದಲ್ಲಿರುವ ಕೋಳಿಗಳನ್ನು ವಿಲೇವಾರಿ ಮಾಡಿದ ನಂತರ ಕೋಳಿ ಸಾಕಾಣಿಕಾ ಕೇಂದ್ರವನ್ನು ಮಾರ್ಚ್-2025ರೊಳಗಾಗಿ ಸ್ಥಗಿತಗೊಳಿಸುವುದಾಗಿ ತಿಳಿಸಿದ್ದಾರೆ **(ಅನುಬಂಧದಲ್ಲಿರಿಸಿದೆ)**. |

**ಇ- ಪಸಂಮೀ 324 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

Date :6th Dec 2024

To,
The Deputy Director
Animal Husbandry Department
Belagavi

From,
Kwality Animal Feeds Pvt Ltd
Belagavi

Respected Sir,

We Kwality Animal Feeds Pvt Ltd, running poultry breeding farm at RS No 86 Kaulapur Wada, Tirthkunde Village, Tal - Khanapur, Dist- Belagavi, having capacity of 29,000 birds. We are using Standard Hygiene Program on continuous basis, hence there is no problem in the surrounding area.

As you are aware, we are coming up with an Ultra-Modern Hatchery at the above mentioned location.

As we committed we have decided to close the breeding farm and then demolish all the poultry sheds by March 2025.

This is for your kind information.

**Thanks and Regards**
**For KWALITY ANIMAL FEEDS PVT. LTD.**

**Authorised Signatory**

Kwality Animal Feeds Pvt Ltd

KWALITY ANIMAL FEEDS PVT. LTD. BELAGAVI



Scanned with OKEN Scanner